# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

ಸಿಸಿ ನಂ. 179/2019

ಚಾಸಾ-04 ಪ್ರಾಸಾ-01

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ ಪಡೆದುಕೊಳ್ಳಲಾಯಿತು.
ದಿನಾಂಕ: 05-11-2025

ಹೆಸರು : ಮಹ್ಮದ ಸಲೀಮುದ್ದೀನ

ತಂದೆಯ ಹೆಸರು : ಇಫ್ತಿಕರ

ವಯಸ್ಸು : 41 ವರ್ಷ

ಉದ್ಯೋಗ : ಅಬಕಾರಿ ಮುಖ್ಯಪೇದೆ

ವಾಸಸ್ಥಳ : ಅಬಕಾರಿ ಕಚೇರಿ ಚಿಂಚೋಳಿ ವಲಯ

ಮುಖ್ಯ ವಿಚಾರಣೆ ಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

2017 ರಿಂದ 2024 ರವರೆಗೆ ಆಳಂದ ವಲಯದ ಅಬಕಾರಿ ಕಚೇರಿಯಲ್ಲಿ ಅಬಕಾರಿ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 02-04-2018 ರಂದು ಬೆಳಿಗ್ಗೆ ನಾನು ಮತ್ತು ಪಂಚರು ಕರ್ತವ್ಯದಲ್ಲಿದಾಗ ಚಾಸಾ 1 ರವರು ನಮ್ಮನ್ನು ಕರೆಸಿ ಅಫಜಲಪೂರ ಪಟ್ಟಣದ ಗತ್ತರಗಾ ರಸ್ತೆಯಲ್ಲಿರುವ ದಿಲಖುಷ ಧಾಭಾದಲ್ಲಿ ಅಕ್ರಮವಾಣಿ ಮದ್ಯ ಸಂಗ್ರಹಣೆ ಮಾಡಿರುತ್ತಾರೆ ಅಂತ ಭಾತ್ಮಿ ಬಂದ ಮೇರೆಗೆ ಅಲ್ಲಿ ಏನಾದರೂ ಅಕ್ರಮ ಕಂಡುಬಂದಲ್ಲಿ ಪಂಚರಿಗೆ ಪಂಚರಾಗಲು ಹೇಳಿರುತ್ತಾರೆ ನಂತರ ಬೆಳಿಗ್ಗೆ 8-30 ಗಂಟೆಗೆ ಸರಕಾರಿ ವಾಹನ ಸಂಖ್ಯೆ KA 32 G 878 ನೇದರಲ್ಲಿ ಹೊರಟು ಮುಂಜಾನೆ 10 ಗಂಟೆಗೆ ದಿಲಖುಷ ಧಾಭಾಗೆ ತಲುಪಿರುತ್ತೇವೆ. ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಒಬ್ಬ ವ್ಯಕ್ತಿ ಓಡಿಹೋದನು. ನಂತರ ಅಧಿಕಾರಿಗಳು ತಮ್ಮ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶೋಧನಾ ಪತ್ರವನ್ನು ಸ್ಥಳದಲ್ಲಿ ತಯಾರಿಸಿ ಅದರ ಮೇಲೆ ಪಂಚರ ಸಹಿ ಪಡೆದು ಶೋಧನೆ ಪ್ರಾರಂಭಿಸಿರುತ್ತಾರೆ.

ಶೋದನೆ ಮಾಡುವಾಗ ಹೋಟೆಲ ಕೌಂಟರ ಕೆಳಗಡೆ 4 ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡುಬಂದಿರುತ್ತದೆ. ನಂತರ ಅಧಿಕಾರಿಗಳು ಅದನ್ನು ತೆರೆದು ನೋಡಿದಾಗ ಅದರಲ್ಲಿ ನಾಕೌಟ 650 ML ನ 16 ಬಾಟಲಿಗಳು ಮತ್ತು Kingfisher Strong 650 ML ನ 70 ಬಾಟಲಿಗಳನ್ನು ಒಟ್ಟು 88 ಬಾಟಲಿಗಳನ್ನು ಜಪ್ತಿ ಪಡಿಸಿಕೊಂಡು ಅವುಗಳಲ್ಲಿ ತಲಾ ಎರಡರಂತೆ 4 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಮುಚ್ಚಳಿಕೆ ಮೇಲೆ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖೆಯ ಮುದ್ರಾ ಸಂಖ್ಯೆ 415 ನ್ನು ಅರಗಿನಿಂದ ತಯಾರಿಸಿದ ಸೀಲನ್ನು ಹಾಕಿರುತ್ತೇವೆ. ನಂತರ ಗುನ್ಹೆಸ್ಥಳ ಚೆಕ್ಕುಬಂದಿ ನೋಡಲಾಗಿ ಪೂರ್ವ, ಉತ್ತರ,ದಕ್ಷಿಣಕ್ಕೆ ಖಾಲ ಜಾಗ ಮತ್ತು ಪಶ್ಚಿಮಕ್ಕೆ ಗತ್ತರಗಾಗೆ ಹೋಗುವ ರಸ್ತೆ ಇರುತ್ತದೆ.

ನಂತರ ಪಂಚನಾಮೆಯನ್ನು ಬೆಳಿಗ್ಗೆ 10-15 ರಿಂದ 11-15 ರವರೆಗೆ ಬರೆದಿರುತ್ತಾರೆ. ನಂತರ ಮುಂದಿನ ಕ್ರಮಕ್ಕಾಗಿ ಠಾಣೆಗೆ ಮರಳಿರುತ್ತೇವೆ

ದಿಃ 05-09-2018 ರಂದು ರಾಸಾಯನಿಕ ಪರೀಕ್ಷಾ ಕೇಂದ್ರ ಬೆಂಗಳೂರುಗೆ ಮುದ್ದೆಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ನಾನು ತೆಗೆದುಕೊಂಡು ಹೋಗಿ, ದಿಃ 05-10-2018 ರಂದು ರಾಸಾಯನಿಕ ವರದಿ ಮತ್ತು ಮುದ್ದೆಮಾಲುಗಳನ್ನು ಮರಳಿ ಕಚೇರಿಗೆ ತಂದು ಹಾಜರುಪಡಿಸಿರುತ್ತೇನೆ.

ಸಾಕ್ಷಿಗೆ ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಮನವಿ ಪತ್ರವನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಮನವಿಯನ್ನು ನಿಪಿ-**1** ಎಂದು ಗುರುತಿಸಲಾಯಿತು.

ಸಾಕ್ಷಿಗೆ ರಾಸಾಯನಿಕ ಪರೀಕ್ಷೆಯ ವರದಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ವರದಿಯನ್ನು ನಿಪಿ-**2** ಎಂದು ಗುರುತಿಸಲಾಯಿತು.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ 2 ನಾಕೌಟ 650 ML ಬಾಟಲಿಗಳು ಮತ್ತು Kingfisher Strong 650 ML ನ 2 ಬಾಟಲಿಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿಮು.ಮಾ. **1** ರಿಂದ **4** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SJG** ವಕೀಲರ ಪರವಾಗಿ **RMS** ವಕೀಲರಿಂದಃ-</u>

ಮು.ಮಾ. 1 ರಿಂದ 4 ಯಾವ ಬ್ಯಾಚಿಗೆ ಸೇರಿದವು ಎಂದು ನನಗೆ ಗೊತ್ತಿಲ್ಲ. ಧಾಭಾದ ಸುತ್ತಮುತ್ತ ಯಾವುದೇ ಅಂಗಡಿಗಳು ಇರುವುದಿಲ್ಲ. ಧಾಭಾದಲಿ ಯಾರೂ ಜನರು ಇರಲಿಲ್ಲ ಎಂದರೆ

ಸರಿ. ನಾವು ಧಾಳಿ ಮಾಡಿದಾಗ ದಾಬಾದಲ್ಲಿ ಯಾರು ಇರಲಿಲ್ಲ. ಓಡಿಹೋದ ವ್ಯಕ್ತಿ ಯಾರು ಎಂದು ಗೊತ್ತಿಲ್ಲ ಎಂದರೆ ಸರಿ. ದಾಭಾಗೆ ಒಂದೇ ಬಾಗಿಲು ಇರುತ್ತದೆ. ದಾಭಾದ ಕೌಂಟರ ಯಾವ ದಿಕ್ಕಿನಲ್ಲಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಜಪ್ತಿ ಕಾಲಕ್ಕೆ ಭಾವಚಿತ್ರವನ್ನು ತೆಗೆದುಕೊಂಡಿಲ್ಲ.

ನಾವು ಯಾವುದೇ ದಾಳಿಗೆ ಹೋಗಿಲ್ಲ, ಯಾವುದೇ ಮುದ್ದೆಮಾಲು ಜಪ್ತಿ ಪಡಿಸಿಕೊಂಡಿಲ್ಲ, ಕಚೇರಿ ಅಂಕಿ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ - **ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ